ಪಿ.ಡಬ್ಲ್ಯೂ .1

**<u>ದಿನಾಂಕಃ 28.07.2025ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಪಾಟೀ ಸವಾಲುಃ ಶ್ರೀ.ಆರ್.ಪಿ. ಆರೋಪಿ ಪರ ವಕೀಲರಿಂದ</u>**

ನಾನು ದೂರುದಾರರ ಕಂಪನಿಯಲ್ಲಿ ಕಳೆದ 8 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಾನು ದೂರುದಾರರ ಕಂಪನಿಯ ಪರವಾಗಿ ಕೇಸ್ ನಡೆಸಲು ಅಧಿಕಾರ ಪತ್ರವನ್ನು ಹಾಜರು ಪಡಿಸಿದ್ದೇನೆ. ಸದರಿ ಅಧಿಕಾರ ಪತ್ರವನ್ನು ದೂರುದಾರರ ಕಂಪನಿ 2018ರಲ್ಲಿ ನನಗೆ ಕೊಟ್ಟಿರುತ್ತದೆ. ಸದರಿ ಅಧಿಕಾರ ಪತ್ರದಲ್ಲಿ ಆರೋಪಿಯ ವಿರುದ್ಧ ನಿರ್ಧಿಷ್ಟವಾಗಿ ಕೇಸ್ ನಡೆಸಲು ನನಗೆ ದೂರುದಾರರ ಕಂಪನಿ ಅಧಿಕಾರ ಕೊಟ್ಟಿರುತ್ತದೆ ಎಂದು ನಮೂದು ಇಲ್ಲ ಎಂದರೆ ಸಾಕ್ಷಿದಾರರು ಜನರಲ್ ಆಗಿ ಅಧಿಕಾರ ಕೊಟ್ಟಿರುತ್ತಾರೆಂದು ಹೇಳುತ್ತಾರೆ. ಸದರಿ ಅಧಿಕಾರ ಪತ್ರದಲ್ಲಿ ನಿರ್ಧಿಷ್ಟವಾಗಿ ಆರೋಪಿಯ ಹೆಸರು ಇಲ್ಲದೇ ಇರುವ ಕಾರಣ ನನಗೆ ಈ ಕೇಸನ್ನು ದೂರುದಾರರ ಕಂಪನಿ ಪರವಾಗಿ ನಡೆಸಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಪ್ರೈಜ್ ಮನಿಯನ್ನು ಚಿಟ್ ಸಬ್ ಸ್ಕ್ರೈಬರ್ ಆದಂತಹ ಜೀಶಾನ್ ಅಹ್ಮದ್ ರವರು ಸ್ವೀಕರಿಸಿರುತ್ತಾರೆ. ಚಿಟ್ ಪ್ರಾರಂಭಿಸುವಾಗ ನಾವು ಜನರಲ್ ಆಗಿ ಕಾಲ್ ಮಾಡುತ್ತೇವೆ. ಈ ಪ್ರಕರಣದ ಚಿಟ್ ನ್ನು ನಾವು 2020ರಲ್ಲಿ ಕಾಲ್ ಮಾಡಿದ್ದೇವು. ನಿಖರವಾದ ದಿನಾಂಕ ಹೇಳಲು ಆಗುವುದಿಲ್ಲ. ಜೀಶಾನ್ ಅಹ್ಮದ್ ರವರು ನಮ್ಮನ್ನು ಯಾವ ದಿನಾಂಕದಂದು ಅಪ್ರೋಚ್ ಮಾಡಿರುತ್ತಾರೆಂದು ನನಗೆ ಈಗ ಹೇಳಲು ಆಗುವುದಿಲ್ಲ. ನಾವು ಸಂಬಂಧಪಟ್ಟ ಅಧಿಕಾರಿಯಿಂದ ಪರವಾನಗಿ ಪಡೆದು ಸಾರ್ವಜನಿಕರಿಗೆ ಚಿಟ್ ನಲ್ಲಿ ಭಾಗವಹಿಸಲು ಆಮಂತ್ರಣ ನೀಡಿರುತ್ತೇವೆ. ನೀವು ಜೀಶಾನ್ ಅಹ್ಮದ್ ರವರಿಗೆ ಹೇಗೆ ಅಪ್ರೋಚ್ ಆಗಿರುತ್ತೀರಿ ಎಂದರೆ ಸಾಕ್ಷಿದಾರರು ಅವರಾಗಿ ಅವರೇ ಬಂದು ಚಿಟ್ ಸಬ್ ಸ್ಕ್ರೈಬ್ ಮಾಡಿರುತ್ತಾರೆಂದು ಹೇಳುತ್ತಾರೆ. ಅವರು ಒಬ್ಬರೇ ಬಂದಿದ್ದರು. ಚಿಟ್ ವ್ಯವಹಾರಕ್ಕೆ ಸಂಬಂಧಿಸಿ ನಮ್ಮ ಕಂಪನಿಯ ನಿಯಮಾಳಿಗಳನ್ನು ಅವರಿಗೆ ತಿಳಿಸಿರುತ್ತೇವೆ. ಸದರಿ ಚಿಟ್ ನ ಮೊತ್ತ 8 ಲಕ್ಷ ರೂ.ಗಳದ್ದಾಗಿರುತ್ತದೆ.

ನಾವು ಪ್ರೈಜ್ ಮನಿಯಾಗಿ 5.60 ಲಕ್ಷ ರೂ.ಗಳನ್ನು ಕೊಟ್ಟಿರುತ್ತೇವೆ. ಜೀಶಾನ್ ಅಹ್ಮದ್ ರವರು 23 ಕಂತುಗಳಲ್ಲಿ ಒಟ್ಟು 5.60 ಲಕ್ಷ ರೂ.ಗಳನ್ನು ಕಟ್ಟಿರುತ್ತಾರೆ. ನಾವು ಯಾವ ದಿನಾಂಕದಂದು ಅವರಿಗೆ ಚಿಟ್ ನ ಮೊತ್ತವನ್ನು ನೀಡಿರುತ್ತೇವೆಂದು ನನಗೆ ಈಗ ಹೇಳಲು ಆಗುವುದಿಲ್ಲ. ನಾವು ಸದರಿಯವರಿಗೆ ಚಿಟ್ ಮೊತ್ತವನ್ನು ನೀಡುವಾಗ ಅವರಿಂದ ಆನ್ ಡಿಮ್ಯಾಂಡ್ ಪ್ರಾಮಿಜರಿ ನೋಟ್, ಶ್ಯೂರಿಟಿ ಫಾರಂ ಮತ್ತು ಗ್ಯಾರಂಟರ್ ಬಾಂಡನ್ನು ಪಡೆದುಕೊಂಡಿರುತ್ತೇವೆ. ನಾವು ಸದರಿ ದಾಖಲೆಗಳನ್ನು ಹೊರತುಪಡಿಸಿ ಅವರ ಆಸ್ತಿಯ ದಾಖಲೆಗಳನ್ನು ಪಡೆದುಕೊಂಡಿರುತ್ತೇವೆ, ಅವು ಯಾವ ದಾಖಲೆಗಳೆಂದು ನನಗೆ ಈಗ ಹೇಳಲು

ಆಗುವುದಿಲ್ಲ. ಸದರಿ ಜೀಶಾನ್ ಅಹ್ಮದ್ ರವರು ನಮಗೆ 3,62,432/- ರೂ.ಗಳನ್ನು ಕೊಡಲು ಬಾಕಿ ಇದ್ದರು. ನಾವು ಅವರ ವಿರುದ್ಧ ಕಾನೂನಿನ ಕ್ರಮ ಜರುಗಿಸಿರುತ್ತೇವೆ. ನಾವು ಜಾಯಿಂಟ್ ರಿಜಿಸ್ಟರ್ ಆಫ್ ಚಿಟ್ಸ್ ರವರ ಮುಂದೆ ಜೀಶಾನ್ ಅಹ್ಮದ್ ರವರ ವಿರುದ್ಧ ಕ್ರಮ ತೆಗೆದು ಕೊಂಡಿರುತ್ತೇವೆ. ನಾವು ಜೀಶಾನ್ ಅಹ್ಮದ್ ರವರ ಮೇಲೆ ಪಡೆದುಕೊಂಡಂತಹ ಪ್ರಾಮಿಜರಿ ನೋಟ್, ಶ್ಯೂರಿಟಿ ಫಾರಂ ಮತ್ತು ಗ್ಯಾರಂಟರ್ ಬಾಂಡನ್ನು ಹಾಜರುಪಡಿಸಿರುತ್ತೇವೆ, ಬೇರೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಸದರಿ ಜೀಶಾನ್ ಅಹ್ಮದ್ ರವರ ವಿರುದ್ಧ ಈ ನ್ಯಾ.ದಲ್ಲಿ ಕ್ರಮ ತೆಗೆದುಕೊಳ್ಳಲು ನಿಮಗೆ ತೊಂದರೆ ಇರಲಿಲ್ಲವಾ ಎಂದರೆ ಸಾಕ್ಷಿದಾರರು ಅವರು ತಲೆ ಮರೆಸಿಕೊಂಡಿದ್ದರು ಎಂದು ಹೇಳುತ್ತಾರೆ. ನಾವು ಅವರ ವಿರುದ್ಧ ಈ ನ್ಯಾ.ದಲ್ಲಿ ಯಾವುದೇ ಕೇಸನ್ನು ಹಾಕಿಲ್ಲವೆಂದರೆ ಸರಿ. ಸದರಿಯವರು ತಲೆ ಮರೆಸಿಕೊಂಡಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾವು 3 ಜನರು ಗ್ಯಾರಂಟರುಗಳ ಸಹಿಯನ್ನು ಪಡೆದು ಕೊಂಡಿರುತ್ತೇವೆ, ಅವರ ಹೆಸರುಗಳನ್ನು ಈಗ ಹೇಳಲು ಆಗುವುದಿಲ್ಲ. ಸದರಿಯವರ ಹೆಸರು ಮತ್ತು ವಿಳಾಸ ಹೇಳಲು ಆಗುವುದಿಲ್ಲ.

ಈ ಪ್ರಕರಣದ ವಿವಾದಿತ ಚೆಕ್ಕಿನಲ್ಲಿ ಆರೋಪಿಯ ಬರವಣಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಜೀಶಾನ್ ಅಹ್ಮದ್ ರವರ ಬಳಿ ಚೆಕ್ ಪಡೆದುಕೊಂಡಿಲ್ಲ. ಈ ಪ್ರಕರಣದ ಚೆಕ್ಕನ್ನು ಆರೋಪಿ ನಮಗೆ ದಿನಾಂಕ 01.08.203ರಂದು ನೀಡಿರುತ್ತಾರೆ. ಅದರ ಪೂರ್ವದಲ್ಲಿ ನಾವು ಆರೋಪಿಗೆ ನೋಟೀಸ್ ಕೊಟ್ಟಿದ್ದೆವು. ಸದರಿ ನೋಟೀಸಿನ ಪ್ರತಿಯನ್ನು ನ್ಯಾ.ದಲ್ಲಿ ಹಾಜರುಪಡಿಸಿಲ್ಲ. ಆರೋಪಿ ಚೆಕ್ ಕೊಡುವಾಗ ಬೇರೆ ಯಾರು ಹಾಜರಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಆರೋಪಿ ನಮ್ಮಿಂದ ಯಾವುದೇ ಹಣ ಸ್ವೀಕರಿಸಿಲ್ಲ ಎಂದರೆ ಸರಿ. ನಿಪಿ.7ರಲ್ಲಿ ಗ್ಯಾರಂಟರುಗಳ ಸಹಿ ಇರುವುದಿಲ್ಲವೆಂದರೆ ಸರಿ. ನಿಪಿ.1ರಲ್ಲಿ ನನ್ನ ಸಹಿ ಇರುವುದಿಲ್ಲವೆಂದರೆ ಸರಿ. ನಿಪಿ.1 ಅಧಿಕಾರ ಪತ್ರದಲ್ಲಿ ನಿರ್ಧಿಷ್ಟವಾಗಿವಾಗಿ ಕೇಸಿನ ನಂಬರ್ ನಮೂದು ಮಾಡಿಲ್ಲವೆಂದರೆ ಸರಿ.

**(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ)**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**(ಓ. ಹೇ. ಕೇ. ಸ)**

**(ಎನ್ ವೈ ರಾವ್)**
**36ನೇ ಎ.ಸಿ.ಜೆ.ಎಂ.,**
**ಬೆಂಗಳೂರು**